ಕಲ್ಯಾಣ ಮಂತ್ರಿಗಳನ್ನು ನಾನು ಕೇಳಬಯಸುತ್ತೇನೆ. ಮಿಸಲಾತಿ ಬಗ್ಗೆ ಕೇಂದ್ರ ಸರ್ಕಾರದಿಂದ ಆದೇಶ ಬಂದಿದೆ. ವಿವಿಧ ರಾಜ್ಯಗಳು ಮಿಸಲಾತಿಯನ್ನು ನಿರ್ಧಾರ ಮಾಡುವುದಕ್ಕೆ ಪರಮನೆಂಟ್ ಕಮಿಷನ್ ಮಾಡಬೇಕು. ಆದರ ಬಗ್ಗೆ ರಾಜ್ಯ ಸರ್ಕಾರ ಯಾವ ಕ್ರಮಗಳನ್ನು ತೆಗೆದುಕೊಂಡಿದೆ? ಯಾವಾಗ ವರದಿಯನ್ನು ಕಳುಹಿಸುತ್ತದೆ ಎಂದು ನಾನು ಕೇಳುತ್ತೇನೆ.

ಶ್ರೀ ಧರ್ಮಸಿಂಗ್ : ಈಗಾಗಲೇ ಸರ್ಕಾರಕ್ಕೆ ಸುಪ್ರೀ ಕೋರ್ಟ್ ತೀರ್ಪು ಕೂಡ ಬಂದಿದೆ. ನವೆಂಬರ್ 16ರಂದು ತೀರ್ಪು ಆದಮೇಲೆ 24ನೇ ನವೆಂಬರ್‌ಗೆ ರಾಜ್ಯ ಸರ್ಕಾರಕ್ಕೆ ಆದೇಶ ಕಳುಹಿಸಿಕೊಟ್ಟಿದ್ದಾರೆ. ಖಾಯಂ ಆಗಿ ಒಂದು ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್ ಕಾನ್‌ಸ್ಟಿಟ್ಯೂಟ್ ಮಾಡಬೇಕು ಎಂದು ಬಂದಿದೆ. ಅದನ್ನು ಲಾ ಡಿಪಾರ್ಟ್‌ಮೆಂಟ್‌ಗೆ ಕಳುಹಿಸಲಾಗಿದೆ. ಅದು ಸರ್ಕಾರದ ಪರಿಶೀಲನೆಯಲ್ಲಿದೆ. ಏಕೆಂದರೆ ನಾಲ್ಕು ತಿಂಗಳ ಒಳಗಾಗಿ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಎಂದು ಇದೆ ಅದನ್ನು ಕೂಡ ಮಾಡುತ್ತಿದ್ದೇನೆ.ಟಿ

ಬೆಣ್ಣೆತೊರಾ ನೀರಾವರಿ ಯೋಜನೆಯಡಿಯಲ್ಲಿ ಮುಳುಗಡೆಯಾಗುತ್ತಿರುವ ಹಳ್ಳಿಗಳ ಮನೆಗಳ ಪರಿಹಾರ ಧನದಲ್ಲಿ ಕಡಿತ (ಡಿಪ್ರಿಸಿಯೇಷನ್)

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ (ಬಸವ ಕಲ್ಯಾಣ) : ಸನ್ಮಾನ್ಯ ಅಧ್ಯಕ್ಷರೆ, ಗುಲ್ಬರ್ಗಾ ನೀರಾವರಿ ಯೋಜನೆಗಳ ವಲಯದಲ್ಲಿ ಬರುವ ಬೀದರ್ ಜಿಲ್ಲೆಯ ಕಾರಂಜಾ ನೀರಾವರಿ ಯೋಜನೆ ಮತ್ತು ಗುಲ್ಬರ್ಗಾ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಮುಲ್ಲಾಮರಿ ಯೋಜನೆಯಡಿಯಲ್ಲಿ ಮುಳುಗಡೆಯಾಗುವ ಹಳ್ಳಿಗಳ ಮನೆಗಳಿಗೆ ಪರಿಹಾರಧನ ಕೊಡುವಾಗ ಡಿಪ್ರಿಸಿಯೇಷನ್ ಹಣ ಕಡಿತ ಮಾಡದೆ ಕೊಡಬೇಕೆಂದು ಸರ್ಕಾರದ ಆದೇಶವಿದ್ದರೂ ಅದೇ ವಲಯದಲ್ಲಿ ಬರುವ ಬೆಣ್ಣೆತೋರ ಯೋಜನೆಗೆ ಮೇಲ್ಕಂಡ ಆದೇಶ ಬರುವುದಿಲ್ಲ. ಇದರಿಂದ ಸರ್ಕಾರ ಇಲ್ಲಿ ಮಲತಾಯಿ ಧೋರಣೆ ತೋರಿಸಿದಂತಾಗಿದೆ. ಇನನು 3Ë4 ತಿಂಗಳಲ್ಲಿ ಪರಿಹಾರ ಧನ ಕೊಡುವವರಿದ್ದಾರೆ. ಆದ್ದರಿಂದ ಈ ಯೋಜನೆಗೂ ಸರ್ಕಾರದಿಂದ ಡಿಪ್ರಿಸಿಯೇಷನ್‌ಸ ಬಗ್ಗೆ ಆದೇಶ ಹೊರಡಿಸಿ ಇಲ್ಲಿನ ರೈತರಿಗೆ ಅನುಕಬಲ ಮಾಡಿಕೊಡಬೇಕೆಂದು ನಾನು ಸರ್ಕಾರಕ್ಕೆ ಹೇಳಬಯಸುತ್ತೇನೆ. ನಮ್ಮ ಬಾಗದವರು ಶ್ರೀಮಾನ್ ಧರ್ಮಸಿಂಗ್ ಅವರು ಕುಳಿತುಕೊಂಡಿದ್ದಾರೆ ಅವರು ಅದರ ಬಗ್ಗೆ ನನಗೆ ಹೇಳಿದರೂ ಸಾಕು.

ಶ್ರೀ ಧರ್ಮಸಿಂಗ್ : ಈಗ ಅವರು ಇರಿಗೇಷನ್ ಪ್ರಾಜೆಕ್ಟ ಬಗ್ಗೆ ಹೇಳಿದ್ದಾರೆ ಈಗಾಗಲೇ ಸರ್ಕಾರ ಇದರ ಬಗ್ಗೆ ಕ್ರಮ ತೆಗೆದುಕೊಳ್ಳತ್ತಾ ಇದೇ.

ಕಿದ್ವಾಯಿ ಮತ್ತು ವಿಕ್ಟೋರಿಯಾ ಆಸ್ಪತ್ರೆಗಳಲ್ಲಿ ಪರೀಕ್ಷೆ ಮಾಡದ ಬ್ಲಡ್ ಟ್ರಾನ್ಸ್‌ಫ್ಯೂಷನ್ ಮಾಡುತ್ತಿರುವುದು

ಶ್ರೀ ಆರ್. ವಿ. ದೇಶಪಾಂಡೆ : ಮೆಡಮ್. ಬೆಂಗಳೂರು ನಗರದ 2 ಆಸ್ಪತ್ರೆಗಳಲ್ಲಿ ಕಿದ್ವಾಯ್ ಮೆಮೋರಿಯಲ್ ಇನ್ಸಿಟ್ಯೂಟ್ ಮತ್ತು ವಿಕ್ಟೋರಿಯಾ ಆಸ್ಪತ್ರೆಗಳಲ್ಲಿ ಇವತ್ತು ಪರೀಕ್ಷ ಮಾಡದ ಬ್ಲಡ್ ಟ್ರಾನ್ಸ್‌ಫ್ಯೂಷನ್ ಮಾಡುತ್ತಿದ್ದಾರೆ ಎಂದು ಟೈಮ್ಸ್ ಆಫ್ ಇಂಡಿಯಾದಲ್ಲಿ ವರದಿಯಾಗಿದೆ. ಉದಾಹರಣೆಯೂ ಬಂದಿದೆ. ಒಬ್ಬ ಸಿದ್ದಪ್ಪ ಕೆ. ಮತ್ತು ಶ್ರೀಮತಿ ರಾಮಕೃಷ್ಣಮ್ಮ ಇವರಿಗೆ ಬ್ಲಡ್ ಕೊಡುವಾಗ ಇಂಥ ಅನ ಟೆಸ್ಟೆಡ್-ಬ್ಲಡ್ ಕೊಟ್ಟು ಗಂಭೀರ ಸಮಸ್ಯೆ